**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**

ಸಿ.ಸಿ. ನಂಃ 420/2017 ಸಿಡಬ್ಲ್ಯೂ: 9 ಪಿಡಬ್ಲ್ಯೂ: 6

ಪ್ರಮಾಣವಚನ ಬೋಧಿಸಲಾಯಿತು ದಿಃ 26-03-2026

ಹೆಸರು : ಡಾ.ಜಯಮ್ಮ

ಗಂಡ ಹೆಸರು : ಡಾ. ಶರಣಬಸಪ್ಪ

ವಯಸ್ಸು : 59 ವರ್ಷ

ಉದ್ಯೋಗ : ವೈದ್ಯರು, ಜಿಮ್ಸ ಆಸ್ಪತ್ರೆ ಕಲಬುರಗಿ

ವಾಸಸ್ಥಳ : ಕಲಬುರಗಿ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ನಾನು 2015 ರಿಂದ 2018 ವರೆಗೂ ಹಿರಿಯ ವೈದ್ಯಾಧಿಕಾರಿ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ03-03-2017 ರಂದು ಸುಮಾರು ಮಧ್ಯಾಹ್ನ 02-30 ಗಂಟೆಗೆ ಚಾಸಾಃ 1 ಮತ್ತು 4 ರವರು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗೆಂದು ನಮ್ಮ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಅವರಿಗೆ ನಾನು ಚಿಕಿತ್ಸೆ ನೀಡಿರುತ್ತೇನೆ. ಚಾಸಾಃ 1 ರವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1) Abrasion measuring around 2 cm X 2 cm over right knee
2) Tenderness on left wrist
3) Tenderness over maxillary area ಕಂಡು ಬಂದಿರುತ್ತದೆ.

ಕ್ರ.ಸಂಖ್ಯೆ 1 ರಿಂದ 3 ರಲ್ಲಿನ ಗಾಯಗಳು ಸಾಧಾ ಸ್ವರೂಪದ ಗಾಯಗಳಾಗಿದ್ದು, ಗಾಯಾಳುದಾರರನ್ನು ಪರೀಕ್ಷಿಸಿ ನಾನು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿಯ ಸದರಿ ಗಾಯದ ಪ್ರಮಾಣ ಪತ್ರವನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿ ಪಿ 4 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಚಾಸಾಃ 4 ರವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1) Tenderness over neck and back ಕಂಡು ಬಂದಿರುತ್ತದೆ.

ಕ್ರ.ಸಂಖ್ಯೆ 1 ರಲ್ಲಿನ ಗಾಯಗಳು ಸಾಧಾ ಸ್ವರೂಪದ ಗಾಯಗಳಾಗಿದ್ದು, ಗಾಯಾಳುದಾರರನ್ನು ಪರೀಕ್ಷಿಸಿ ನಾನು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿಯ ಸದರಿ ಗಾಯದ ಪ್ರಮಾಣ ಪತ್ರವನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿ ಪಿ 5 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮು ಮಾ 1 ನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಇಂತಹಾ ವಸ್ತುವಿನಿಂದ ಹೊಡೆದರೆ ಮೇಲೆ ಹೇಳಿರುವ ಗಾಯಗಳಾಗು ಸಾಧ್ಯತೆ ಇರುತ್ತದೆ ಎಂದು ನುಡಿಯುತ್ತಾರೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎನ್ ಎಂ ವಕೀಲರಿಂದ ಃ

ಯಾವ ಒಬ್ಬ ವ್ಯಕ್ತಿ ಗಿಡ ಗಂಟೆ ಹತ್ತಿದಾಗ ಇಂತಹಾ ಗಾಯಗಳು ಆಗುವ ಸಾಧ್ಯತೆಗಳು ಇದೆ ಎಂದರೆ ಸರಿ. ನಾನು ಚಾ ಸಾ 11 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನ ಎಂದರೆ ಸರಿಯಿಲ್ಲ. ಚಾ ಸಾ 1 ರವರಿಗೆ ಅನುಕೂಲವಾಗಲಿ ಎಂದು ಸುಳ್ಳು ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**